# ಕಾಯಿನ್ ಏಜ್



**ಮಣಿಪಾಲದಲ್ಲಿರುವ ಈ ಕಲಾಕೃತಿ ಗಮನ ಸೆಳೆಯುತ್ತದೆ. ದಕ್ಷಿಣ ಕೊರಿಯಾದ ೨ ಕಡೆ ಇಂತಹ ಕಲಾಕೃತಿಗಳಿದ್ದು, ಭಾರತದಲ್ಲಿ ಮುಂಬೈಯ ಜಿಂದಾಲ್ ಕಂಪೆನಿಯ ಸ್ಥಳದಲ್ಲಿ ಇಂತಹ ಕಲಾಕೃತಿ ಇದೆಯಂತೆ.**

■ ಚಿತ್ರ– ಬರಹ: **ಡಾ. ಎನ್.ಸ್ವಾತಿ**

**ಕು**ಂದಾಪುರ ಮೂಲದ, ಪ್ರಸ್ತುತ ದಕ್ಷಿಣ ಕೊರಿಯಾ ನಿವಾಸಿ ಅಂತಾರಾಷ್ಟ್ರೀಯ ಕಲಾವಿದ ಲಕ್ಷ್ಮೀನಾರಾಯಣ ತಲ್ಲೂರು ಅವರಿಂದ ಅಪರೂಪದ ಶಿಲ್ಪ ಕಲಾಕೃತಿಯೊಂದು ಉಡುಪಿಯ ಮಣಿಪಾಲದಲ್ಲಿ ಅನಾವರಣಗೊಂಡಿದೆ.

ಇದರಲ್ಲಿ ಏಳು ನಾಣ್ಯಗಳನ್ನು ಕೆತ್ತಿ ಒಂದರ ಮೇಲೊಂದರಂತೆ ಜೋಡಿಸಿ ಅಳವಡಿಸಲಾಗಿದೆ. ಇದು 6.5 ಟನ್ ಭಾರ, 20 ಅಡಿ ವ್ಯಾಸ ಹಾಗೂ 27 ಅಡಿ ಎತ್ತರವಿದೆ. ಸೂರ್ಯ, ಚಂದ್ರರ ಇಮೇಜ್‌ನಲ್ಲಿ ಸ್ವಾತಂತ್ರ್ಯಪೂರ್ವದ ಒಂದು ಪೈಸೆ ನಾಣ್ಯ, ಬಾರ್ಕೂರಿನ ಟಂಕ ಶಾಲೆಯಲ್ಲಿ ಮುದ್ರಿಸಿರುವ ಕಡು ಕಂದು ನಾಣ್ಯ, ಐದು ಪೈಸೆ ನಾಣ್ಯ, ವಿಜಯನಗರದ ಕಾಲದಲ್ಲಿ ಬಳಕೆ ಮಾಡಿರುವ ಕನ್ನಡ ಅಕ್ಷರ, ಮೀನು, ದೇವರ ಛತ್ರಿ, ಚಾಣಕ್ಯ, ಭತ್ತದ ತೆನೆ, ಭರತನಾಟ್ಯದ ಮುದ್ರೆ, ಅಡಿಕೆ ಪಿಂಗಾರ, ಅಳುಪರ ಲಾಂಛನ, ಕವಡೆ ಚಿತ್ರಗಳು ಇದರಲ್ಲಿ ಅಡಕಗೊಂಡಿವೆ.

ಮಣಿಪಾಲದ ನಿರ್ಮಾಣಕ್ಕೆ ವಿಶಿಷ್ಟ ಕೊಡುಗೆ ನೀಡಿದ ಟಿ.ಉಪೇಂದ್ರ ಅನಂತ ಪೈ ಅವರ ಸ್ಮರಣಾರ್ಥವಾಗಿ ಮಣಿಪಾಲದಿಂದ ಜಿಲ್ಲಾಧಿಕಾರಿಗಳ ಕಛೇರಿಗೆ ತೆರಳುವ ಮಾರ್ಗಮಧ್ಯದಲ್ಲಿ ವೃತ್ತವೊಂದನ್ನು ರಚಿಸಿ ಅಲ್ಲಿ ಈ ಕಲಾಕೃತಿಯನ್ನು ಸ್ಥಾಪಿಸಲಾಗಿದೆ. ವೃತ್ತದ ಸುತ್ತಲೂ ಲೈಟ್ ಅಳವಡಿಸಿರುವುದರಿಂದ ರಾತ್ರಿ ವೇಳೆಗೂ ವೀಕ್ಷಣೆಗೆ ಅವಕಾಶವಿದೆ. ಕಲಾವಿದ ತಲ್ಲೂರು ಅವರು ಹೇಳುವಂತೆ, ಈ ಕಲಾಕೃತಿಗೆ ಮಿಲ್ಲಿಂಗ್ ತಂತ್ರಜ್ಞಾನವನ್ನು ಬಳಸಿಕೊಂಡಿದ್ದಾರೆ. 3ಡಿ ಸ್ಕ್ಯಾನಿಂಗ್ ಮಾಡಿ, ಸಣ್ಣ ಮಾದರಿಯನ್ನು ಆವೆ ಮಣ್ಣಿನಲ್ಲಿ ರೂಪಿಸಿ ಚೆನ್ನೈನಲ್ಲಿ ಕಲಾಕೃತಿಯನ್ನು ರಚಿಸಲಾಗಿದೆ.

ದಕ್ಷಿಣ ಕೊರಿಯಾದ 2 ಕಡೆ ಇಂತಹ ಕಲಾಕೃತಿಗಳಿದ್ದು, ಭಾರತದಲ್ಲಿ ಮುಂಬೈಯ ಜಿಂದಾಲ್‌ಗೆ ಸೇರಿದ ಸ್ಥಳದಲ್ಲಿ ಇಂತಹ ಕಲಾಕೃತಿ ಇದೆಯಂತೆ. ಮಣಿಪಾಲದ ಮಾಹೆ ವಿಶ್ವವಿದ್ಯಾನಿಲಯದ ಅಧೀನದಲ್ಲಿ ತಾಂತ್ರಿಕ ಕಾಲೇಜು, ಮೆಡಿಕಲ್ ಕಾಲೇಜುಗಳಿದ್ದು ಅನೇಕ ವಿದೇಶಿ ವಿದ್ಯಾರ್ಥಿಗಳು ಇಲ್ಲಿ ಮೆಡಿಕಲ್, ಇಂಜಿನಿಯರಿಂಗ್ ಅಧ್ಯಯನ ಮಾಡುತ್ತಿದ್ದಾರೆ. ಪ್ರತಿ ದಿನ ಇಲ್ಲಿಗೆ ಸಹಸ್ರಾರು ಸಂಖ್ಯೆಯಲ್ಲಿ ಜನರು ಭೇಟಿ ನೀಡುತ್ತಿದ್ದಾರೆ. ಇಲ್ಲಿ ಮಣ್ಣ ಪಳ್ಳ ಉದ್ಯಾನವನ, ಗೋಪಾಲಕೃಷ್ಣ ದೇವಸ್ಥಾನ, ತಾರಾಲಯ, ಅನಾಟಮಿ ಮ್ಯೂಸಿಯಂ, ಎಂಡ್ ಪಾಯಿಂಟ್ ಮೊದಲಾದ ಪ್ರೇಕ್ಷಣೀಯ ಸ್ಥಳಗಳೂ ಇವೆ. ಇದರೊಂದಿಗೆ ವೃತ್ತದಲ್ಲಿನ ಕಾಯಿನ್ ಏಜ್ ಕಲಾಕೃತಿಯು ಹೊಸ ಸೇರ್ಪಡೆ. ●

